ಶ್ರೀ ವೀರೇಂದ್ರ ಪಾಟೀಲ್.—ಸಭೆಗೆ ಅಗೌರವ ಮಾಡಬೇಕೆಂಬ ಉದ್ದೇಶ ಇಲ್ಲ, ಯಾವುದೇ ಒಂದು ವರದಿಯನ್ನು ೬ ತಿಂಗಳೊಳಗೆ ಇಡಬೇಕು. ಒಂದು ವರದಿ ಬಂದ ಮೇಲೆ ಇಲಾಖೆಯಲ್ಲಿ ಪ್ರೊಸೆಸ್ ಆಗಿ ಕ್ಯಾಬಿನೆಟ್‌ವರೆಗೆ ಹೋಗಿ ಅಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಈ ಎಲ್ಲಾ ಫಾರ್ಮಾಲಿಟೀಸ್ ಇದೆ. ಈ ವಿಧ್ಯದಲ್ಲಿ ೬ ತಿಂಗಳ ಅವಧಿಯಲ್ಲಿ ಅಸೆಂಬ್ಲಿ ಮುಂದಿಡುವುದಕ್ಕೆ ಹಿಂದಿನ ಅಸೆಂಬ್ಲಿಯಲ್ಲಿ ಇಡುವುದಕ್ಕೆ ಆಗಲಿಲ್ಲ. ಏಕೆಂದರೆ ಇನ್ನೂ ಪ್ರೊಸೆಸ್ ಆಗುತ್ತಿತ್ತು. ಈ ಅಸೆಂಬ್ಲಿ ಸೇರಿದ ಮೇಲೆ ಅದನ್ನು ನಾವು ಇಟ್ಟಿದ್ದೇವೆ. ಅದರಲ್ಲಿ ಏನು ಶಿಫಾರಸ್ಸು ಮಾಡಿದ್ದಾರೆ, ಅದನ್ನು ಒಪ್ಪಿಕೊಂಡಿದ್ದೇವೆ. ಮುಂದೆ ಯಾವ ರೀತಿ ಮಾಡಬೇಕೆಂಬುದನ್ನು ಇಲಾಖೆಯವರು ಪರಿಶೀಲನೆ ಮಾಡುತ್ತಿದ್ದಾರೆ.

SRI H. EKANTAIAH.—When it is obligatory to place the report within six months, you have not placed it so for, Now you are placing it. What else it means ?

MR. SPEAKER.—It would have met your point, if the Hon. Minister after placing the report of the Enquiry Commission on the Table of the House, had accepted the recommendation and should have placed the action taken report. The Government has said that they will take action and submit the action taken report. Would that be alright ? If so, that has been fulfilled now.

SRI H. EKANTAIAH.—Sir, that is not the point. ಆರು ತಿಂಗಳೊಳಗೆ ಇಡಬೇಕು. ಪರಿಶೀಲಿಸುವುದಕ್ಕೆ ಸಾಕಷ್ಟು ಸಮಯ ಇರದಿದ್ದರೆ ೬ ತಿಂಗಳೊಳಗೆ ಸಭೆಯ ಮುಂದಿಟ್ಟು ಕ್ರಮ ಕೈಗೊಳ್ಳುತ್ತಿದ್ದೇವೆಂದು ಹೇಳಬೇಕಾಗಿತ್ತು. ಆರು ತಿಂಗಳೊಳಗೆ ಮಂಡನೆ ಮಾಡದೆ ಇರುವುದನ್ನು ತಾವು ಪರಿಶೀಲಿಸಬೇಕಾಗಿದೆ. ಇದು ಈ ಸಭೆಯ ಘನತೆ ಗೌರವಕ್ಕೆ ತಕ್ಕುದಲ್ಲ. ಇವತ್ತು ಸಹ ಅಷ್ಟೇ ಹೇಳಿದರೆ ಸಾಲದು. ಒಪ್ಪಿದ್ದರೆ ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಬೇಕಾಗಿತ್ತು. ಈ ಎರಡು ಲೋಪಗಳ ಬಗ್ಗೆ ಏನಂ ಹೇಳುತ್ತಾರೆಂದು ತಾವು ಕೇಳಬೇಕು.

SRI R. V. DESHPANDE.—Sir, the Hon. Chief Minister, no doubt has placed his views with regard to the practical difficulties. I do understand. However, when there is a mandatory provision according to which it is obligatory on the part of the Government to place the report within 6 months, as rightly pointed out by you, there has been lapse of 6 months. It is also obligatory that there should be a Memorandum. The Government may accept or reject, we are not going into the merits. But, there has been a lapse on the part of the Government. Therefore, the Government has to admit and see that in future such lapses do not recur. The Hon. Chief Minister or the Minister should admit that there has been lapse, may not be purposeful, and that such lapses will not occur in future.

MR. SPEAKER.—I will look into it. ಈಗ ಬೈರೇಗೌಡರ ಗಮನ ಸೆಳೆಯುವ ಸೂಚನೆ.

ಭೂ ಹಗರಣಗಳ ಬಗ್ಗೆ ಕಂಲದೀಪ್‌ಸಿಂಗ್ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿರುವ ಬಗ್ಗೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಗಮನ ಸೆಳೆಯುವ ಸೂಚನೆಗೆ ಆಮೇಲೆ ಬರುತ್ತೇನೆ. ತಾವು ಅಪ್ಪಣೆ ಕೊಡುವುದಾದರೆ ನಾನು ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬೇಕೆಂದಿದ್ದೇನೆ. ವಿಚಾರ ಏನೆಂದರೆ...

MR. SPEAKER.—You have not sent anything in writing nor have you come and met me in Chamber. That is the practice I have been following, if you want to raise any matter. Between me and you, there is no telepathy that is working ಆದ್ದರಿಂದ ಆ ಬಗ್ಗೆ ಕಾಗದ ಬರೆಯಬೇಕು. ಇಲ್ಲವೇ ನೀವು ಬಂದು ನನ್ನನ್ನು ಮೀಟ್ ಮಾಡಬೇಕು.

ಶ್ರೀ ಸಿ. ಬೈರೇಗೌಡ.—ತಾವು ಏನು ಹೇಳಿದ್ದೀರಿ, ಅದನ್ನು ನಾನು ಅಕ್ಷರಶಃ ಒಪ್ಪುತ್ತೇನೆ. ಆದರೆ ಈ ವಿಚಾರ ಎಂಥದ್ದು ಎಂದರೆ ಬಹಳ ಮಹತ್ತರವಾದದ್ದು. ಇಲ್ಲಿ ನಡೆದಿರತಕ್ಕ ಭೂ ಹಗರಣಗಳ ಬಗ್ಗೆ ಕುಲದೀಪ್‌ಸಿಂಗ್ ಆಯೋಗ ಕೇಂದ್ರ ಸರ್ಕಾರಕ್ಕೆ ವರದಿ ಕೊಟ್ಟಿದೆ. ಇದು ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ. ರಾಜ್ಯ ಸರ್ಕಾರ ಕೂಡ ಅನೇಕರ ಮೇಲೆ ಕ್ರಮ ಕೈಗೊಳ್ಳತಕ್ಕ ಅಗತ್ಯ ಇದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಹೇಳಬೇಕು. ನಾನು ವಿಶೇಷವಾಗಿ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಕೇಂದ್ರಸರ್ಕಾರಕ್ಕೆ ಒಪ್ಪಿಸಿರುವ ವರದಿಯನ್ನು ಈಗಾಗಲೇ ಇಲಾಖೆಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಕಳುಹಿಸಿದ್ದಾರೆಂಬುದನ್ನು ಪತ್ರಿಕಾ ವರದಿ ಆಧಾರದ ಮೇಲೆ ತಿಳಿದುಕೊಂಡಿದ್ದೇನೆ, ಇಲಾಖೆಗೆ ಹೋಗಿರತಕ್ಕ ಸಂದರ್ಭದಲ್ಲಿ ರಾಜ್ಯ ಸರ್ಕಾರ ಕೂಡ ಆ ವರದಿಯ ಕಾಪಿಯನ್ನು ಪಡೆದು ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ರಾಜ್ಯದ ದೃಷ್ಟಿಯಿಂದ ಇದನ್ನು ಮಾಡಬೇಕು. ದೇಶದ ಜನತೆಗೆ ಇದನ್ನು ತಿಳಿಸಬೇಕಾಗಿದೆ. ದೇಶದ ದೃಷ್ಟಿಯಿಂದ ರಾಜ್ಯದ ದೃಷ್ಟಿಯಿಂದ, ಸುವ್ಯವಸ್ಥಿತ ಆಡಳಿತದ ದೃಷ್ಟಿಯಿಂದ ಇದರ ಅವಶ್ಯಕತೆ ಇದೆ. ಆದ್ದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ವರದಿ ತರಿಸಿ ಏನಾಗಿದೆ ನೋಡಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತೇನೆ.

ಶ್ರೀ ಪಾಟಾಳ್ ನಾಗರಾಜ್.—ಅಧ್ಯಕ್ಷರೆ, ಒಂದೇ ಪ್ರಶ್ನೆ. ಮುಗಿಸಿಬಿಡುತ್ತೇನೆ. ಈಗ ಜನಜನಿತವಾಗಿ ಪತ್ರಿಕೆಯಲ್ಲಿ ಬಂದಿರತಕ್ಕದ್ದು ನಮ್ಮ ಸಭೆಯ ಸದಸ್ಯರು ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷರು ರಾಜೀನಾಮೆ ಕೊಟ್ಟಿದ್ದಾರೆ. ಅಂದರೆ ಇದು ಪ್ರಮುಖವಾದ ಪ್ರಶ್ನೆ. ಕುಲದೀಪ್‌ಸಿಂಗ್ ಕಮಿಷನ್ ವರದಿ ತಮ್ಮ ಸರ್ಕಾರಕ್ಕೆ ತಲುಪಿದೆಯೆ ? ಮಾನ್ಯ ಮುಖ್ಯಮಂತ್ರಿಗಳೆಂದಯಮಾಡಿ ಇದರ ಬಗ್ಗೆ ಸ್ಪಷ್ಟೀಕರಣ ಕೊಟ್ಟರೆ ಒಳ್ಳೆಯದು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ಕುಲದೀಪ್‌ಸಿಂಗ್ ಕಮಿಷನ್ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದೆ ಎಂದು ಯಾವರೀತಿಯಲ್ಲಿ ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಓದಿದ್ದಾರೋ ಅದೇರೀತಿ ನಾನೂ ಸಹ ಓದಿದ್ದೇನೆ. ಕುಲದೀಪ್‌ಸಿಂಗ್ ಕಮಿಷನ್ ನೇಮಕ ಮಾಡಿದ್ದು ಕೇಂದ್ರ ಸರ್ಕಾರ. ಕೇಂದ್ರ ಸರ್ಕಾರ ನೇಮಕ ಮಾಡಿದಂಥ ಕಮಿಷನ್ ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕೇ ಹೊರತು ರಾಜ್ಯ ಸರ್ಕಾರಕ್ಕೆ ಕೊಡುವುದಕ್ಕಾಗುವುದಿಲ್ಲ. ಇನ್ನು ಕೇಂದ್ರ ಸರ್ಕಾರ ಆ ವರದಿ ಪಡೆದುಕೊಂಡ ಮೇಲೆ ಅದನ್ನು ಪರಿಶೀಲಿಸುತ್ತದೆ. ಆ ವರದಿಯನ್ನು ಒಪ್ಪುತ್ತಾರೋ ಇಲ್ಲವೋ ಎಂಬ ಬಗ್ಗೆ ಖಚಿತವಾದ ಒಂದು ಅಭಿಪ್ರಾಯಕ್ಕೆ ಅವರು ಬರಬೇಕಾಗುತ್ತದೆ. ಅವರು ಖಚಿತವಾದ ಅಭಿಪ್ರಾಯಕ್ಕೆ ಬಂದಮೇಲೆ ಬಹುಶಃ ಅವರು ತಮ್ಮ ಅಭಿಪ್ರಾಯದ ಜೊತೆಗೆ ವರದಿಯ ಪ್ರತಿಯನ್ನು ನಮ್ಮ ಕಡೆ ಮುಂದಿನ ಕ್ರಮ ತೆಗೆದುಕೊಳ್ಳಿ ಎಂದು ಕಳುಹಿಸುವುದು ಸ್ವಾಭಾವಿಕ. ಏಕೆಂದರೆ ಹಗರಣ ಆಗಿರುವುದು ಕರ್ನಾಟಕದಲ್ಲಿ. ಭೂಮಿ ಇರುವುದು ಕರ್ನಾಟಕದಲ್ಲಿ ತಪ್ಪಿತಸ್ಥರು ಇರುವುದು ಕರ್ನಾಟಕದಲ್ಲಿ. ಹೀಗಿರುವುದರಿಂದ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದವರು ನಮಗೆ ತಿಳಿಸಬೇಕಾಗುತ್ತದೆ. ನಾವಾಗಿಯೇ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಬೈರೇಗೌಡರು ಒಂದೂ ವಿಚಾರ ಹೇಳಿದರು. ಅವರು ವರದಿ ಒಪ್ಪಿಸಿದ್ದಾರೆ ಎಂದು ಗೊತ್ತಾದ ಮೇಲೆ ಕಾಪಿ ತೆಗೆದುಕೊಳ್ಳುವುದಕ್ಕೆ ಏತಕ್ಕೆ ಪ್ರಯತ್ನ ಮಾಡುವುದಿಲ್ಲ ಎಂದೂ. ನಾನು ಈಗಾಗಲೇ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿದ್ದೇನೆ, ಅವರು ಬರೆದಿರಬಹುದು. ಇಲ್ಲದಿದ್ದರೆ ಇಂದು ಬರೆಯುತ್ತಾರೆ. ಒಂದು ಕಾಪಿ ತರಿಸುವ ಪ್ರಯತ್ನ ನಾವು ಮಾಡುತ್ತೇವೆ. ಮುಂದಿನ ಕ್ರಮ subject to examination by the Law Department, ಬಹಳ ಮಟ್ಟಿಗೆ ಕೇಂದ್ರಸರ್ಕಾರದವರು ಈ ಕಮಿಷನ್ ರಿಪೋರ್ಟ್ ಮೇಲೆ ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ಅದರ ಮೇಲೆ ಅವಲಂಬಿತವಾಗುತ್ತದೆ.